# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1567 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದದಿನಾಂಕ | 21/03/2025 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕರಿಗೆ ನೀಡಲಾಗುತ್ತಿರುವ ವೈದ್ಯಕೀಯ ಸಹಾಯಧನ, ಪ್ರಮುಖ ಕಾಯಿಲೆಗಳ ಚಿಕಿತ್ಸಾ ವೆಚ್ಚ ಹಾಗೂ ಅಪಘಾತ ಚಿಕಿತ್ಸಾ ವೆಚ್ಚದ ವಿವರಗಳೇನು: | ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ನಿಯಮ-46 ರಡಿ ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಬಿತರಿಗೆ ರೂ.300/- ರಿಂದ ರೂ.20000/-ರವರೆಗೆ ವೈದ್ಯಕೀಯ ಸಹಾಯಧನ ಮತ್ತು ನಿಯಮ-48 ರಡಿ ರೂ.2.00 ಲಕ್ಷದವರೆಗೆ ವೈದ್ಯಕೀಯ ವೆಚ್ಚದ ಮರು ಪಾವತಿ ಮಾಡಲಾಗುತ್ತಿದೆ. |
| ಆ) | ಸದರಿ ಚಿಕಿತ್ಸಾ ವೆಚ್ಚಗಳನ್ನು ಅವೈಜ್ಞಾನಿಕವಾಗಿ ಅತೀ ಕಡಿಮೆ ನಿಗದಿ ಮಾಡಿರುವುದು ಮತ್ತು ಮರುಪಾವತಿ ಮಾಡುವಲ್ಲಿ ಸಾಕಷ್ಟು ವ್ಯತ್ಯಯ ಹಾಗೂ ವಿಳಂಬವಾಗುತ್ತಿರುವುದರಿಂದ ಕಾರ್ಮಿಕರು ಸಂಕಷ್ಟಕ್ಕೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನೋಂದಾಯಿತ ಫಲಾನುಭವಿಗಳಿಂದ ಸಲ್ಲಿಸಲಾದ ವೈದ್ಯಕೀಯ ಮತ್ತು ಪ್ರಮುಖ ವೈದ್ಯಕೀಯ ಸಹಾಯಧನದ ಅರ್ಹ ಅರ್ಜಿಗಳಿಗೆ ವೈದ್ಯಾಧಿಕಾರಿಗಳಿಂದ ಸಿಜಿಹೆಚ್‌ಎಸ್ ದರಗಳನ್ವಯ ದರಗಳನ್ನು ನಿಗದಿಪಡಿಸಿ ಸಕಾಲಕ್ಕೆ ಒಳಪಟ್ಟು ನಿಯಮಾನುಸಾರ ಮಂಜೂರು ಮಾಡಲಾಗುತ್ತಿದೆ. |
| ಇ) | ಈಗಾಗಲೇ ಜಾರಿಗೆ ತಂದಿರುವ "ಹೆಲ್ತ್ ಕ್ಯಾಂಪ್" ಗಳು ಅನಾವಶ್ಯಕ ದುಂದು ವೆಚ್ಚವಾಗಿದ್ದು, ಅವುಗಳಿಂದ ಕಾರ್ಮಿಕರಿಗೆ ಯಾವುದೇ ರೀತಿಯಲ್ಲಿ ಪೂರ್ಣ ಮಟ್ಟದ ಪ್ರಯೋಜನ | ಮಂಡಳಿಯಲ್ಲಿ ಜಾರಿಗೊಳಿಸಿರುವ ಪ್ರಿವೆಂಟಿವ್ ಹೆಲ್ ಕೇರ್ ಯೋಜನೆಯಿಂದ ನೋಂದಾಯಿತ ಫಲಾನುಭವಿಗಳು ಮತ್ತು ಅವರ ಅವಲಂಬಿತರು ಅವರು ವಾಸಿಸುವ/ಕೆಲಸ ಮಾಡುವ ಸ್ಥಳಗಳಲ್ಲಿಯೇ |

| | | |
|---|---|---|
| | ದೊರೆಯುತ್ತಿಲ್ಲ ಎಂಬ ಅಭಿಪ್ರಾಯ ವಿದ್ದು, ಈ ಕುರಿತು ಸರ್ಕಾರ ಏನು ಕ್ರಮ ಕೈಗೊಂಡಿದೆ; | ಉಚಿತವಾಗಿ ವೈದ್ಯಕೀಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಮುಂಜಾಗ್ರತವಾಗಿ ಕಾರ್ಮಿಕರ ಆರೋಗ್ಯದ ಬಗ್ಗೆ ತೊಂದರೆ ಉಂಟಾದಲ್ಲಿ ಕ್ರಮವಹಿಸಲು ಅನುಕೂಲವಾಗುತ್ತದೆ. ಇದರಿಂದ ಕಾರ್ಮಿಕರ ಆರೋಗ್ಯದ ಗುಣಮಟ್ಟವನ್ನು ಹೆಚ್ಚಿಸಬಹುದು. |
| ಈ) | ವೈದ್ಯಕೀಯ ಸಹಾಯಧನ, ಪ್ರಮುಖ ಕಾಯಿಲೆಗಳ ಚಿಕಿತ್ಸಾ ವೆಚ್ಚ ಹಾಗೂ ಅಪಘಾತ ಚಿಕಿತ್ಸಾ ವೆಚ್ಚವನ್ನು ಪೂರ್ಣವಾಗಿ ಕಾರ್ಮಿಕರಿಗೆ ಪಾವತಿಸಲು ಅಗತ್ಯ ಕ್ರಮವಹಿಸುವುದು ಅಥವಾ ನಗದು ರಹಿತ ವೈದ್ಯಕೀಯ ಚಿಕಿತ್ಸಾ ಸೇವೆ ಅಥವಾ ಯಶಸ್ವಿನಿ ಮಾದರಿ ಆರೋಗ್ಯ ವಿಮೆಯನ್ನು ಜಾರಿಗೊಳಿಸಲು ಸರ್ಕಾರ ಈ ಕೂಡಲೇ ಅಗತ್ಯ ಕ್ರಮವಹಿಸುವುದೇ? | ನೋಂದಾಯಿತ ಫಲಾನುಭವಿಗಳು ನಿಯಮ-46ರಡಿ ವೈದ್ಯಕೀಯ ಸಹಾಯಧನ ಮತ್ತು ನಿಯಮ-48ರಡಿ ಪ್ರಮುಖ ಕಾಯಿಲೆಗಳ ಚಿಕಿತ್ಸಾ ವೆಚ್ಚದ ಮರುಪಾವತಿಗಾಗಿ ಸಲ್ಲಿಸಲಾದ ಅರ್ಹ ಅರ್ಜಿಗಳಿಗೆ ಸಿಜಿಹೆಚ್‌ಎಸ್ ದರಗಳನ್ವಯ ದರಗಳನ್ನು ನಿಗದಿಪಡಿಸಿ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡಲಾಗುತ್ತಿದ್ದು, ಪ್ರಾಯೋಗಿಕವಾಗಿ ಕ್ಯಾನ್ಸರ್ ಮತ್ತು ಹೃದ್ರೋಗ ಖಾಯಲೆಗಳಿಗೆ ನಗದು ರಹಿತ ಚಿಕಿತ್ಸೆಯನ್ನು ಆಯ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ಒದಗಿಸಲು ಮಂಡಳಿಯಿಂದ ಕ್ರಮವಹಿಸಲಾಗುತ್ತಿದೆ. |

**ಕಾಇ 130 ಎಲ್ ಇಟಿ 2025**

**(ಸಂತೋಷ್ ಎಸ್.ಲಾಡ್)**
**ಕಾರ್ಮಿಕ ಸಚಿವರು**